ಶ್ರೀ ಎಂ. ಗಂಗಣ್ಣ.—(ಶ್ರೀ ಎಂ. ನಾಗಪ್ಪನವರ ಪರವಾಗಿ) ಮಾನ್ಯ ಅಧ್ಯಕ್ಷರೆ, ಸಚಿವರು ತಮ್ಮ ಉತ್ತರದಲ್ಲಿ ೧೯೭೮-೭೯ನೇ ಇಸವಿಯಿಂದ ಇಲ್ಲಿಯವರೆಗೆ ಕುಷ್ಟಗಿ ತಾಲ್ಲೂಕಿನಲ್ಲಿ ರಸ್ತೆಗಳಿಗಾಗಿ ಮಂಜೂರಾದ ಹಣ ಮತ್ತು ಖರ್ಚಾದ ಹಣವನ್ನು ತಿಳಿಸಿದ್ದಾರೆ. ಆದರೆ ಪ್ರತಿ ವರ್ಷ ಹಣದ ಪ್ರಮಾಣ ಕಡಿಮೆ ತೋರಿಸಿದ್ದಾರೆ. ಇದಕ್ಕೆ ಕಾರಣಗಳೇನು ಎಂಬುದನ್ನು ಮಂತ್ರಿಗಳು ದಯವಿಟ್ಟು ತಿಳಿಸಬೇಕು.

ಶ್ರೀ ಕಾಗೋಡು ತಿಮ್ಮಪ್ಪ.—ಆಯಾ ವರ್ಷದಲ್ಲಿ ಆಗತ್ಯಕ್ಕೆ ಅನುಗುಣವಾಗಿ ನಷ್ಟೆಷ್ಟು ಹಣವನ್ನು ಒದಗಿಸಿಕೊಟ್ಟಿದ್ದಾರೋ ಅಷ್ಟು ಹಣವನ್ನು ಖರ್ಚು ಮಾಡಿದ್ದಾರೆ. ಜಾಸ್ತಿ ಹಣ ಅವಶ್ಯಕತೆಯಿದ್ದಾಗ ಅದನ್ನು ಒದಗಿಸಿಕೊಂಡಿದ್ದೇವೆ.

ಶ್ರೀ ಎಂ. ಗಂಗಣ್ಣ.—ತಮಗೆ ಗೊತ್ತಿರುವಂತೆ ರಾಯಚೂರು ಜಿಲ್ಲೆಯು ಕುಷ್ಟಗಿ ಅತ್ಯಂತ ಹಿಂದುಳಿದ ಭಾಗ. ಅಲ್ಲಿನ ರಸ್ತೆ ಪರಿಸ್ಥಿತಿಯನ್ನು ತಾವು ನೋಡಿದ್ದೀರಿ. ಮನುಷ್ಯರೂ ಓಡಾಡುವುದಕ್ಕೆ ಆಗಲಾರದ ಅನೇಕ ರಸ್ತೆಗಳಿವೆ. ಸರ್ಕಾರ ಈ ಕಡೆ ಹೆಚ್ಚಿನ ಲಕ್ಷ್ಯ ಕೊಟ್ಟಿಲ್ಲ. ಹೆಚ್ಚು ಹಣ ಬಿಡುಗಡೆ ಮಾಡಿಲ್ಲ. ಈಗಾಗಲೇ ೧೦ ಲಕ್ಷ ರೂಪಾಯಿ ಖರ್ಚಾಗಿದೆ ಎಂದು ಹೇಳಿದ್ದಾರೆ. ಈವರ್ಷ ಅಂದರೆ ಇನ್ನು ನಾಲ್ಕೈದು ತಿಂಗಳಲ್ಲಿ ೧೦ ಲಕ್ಷ ರೂಪಾಯಿಗಳನ್ನು ಮಾನ್ಯ ಮಂತ್ರಿಗಳು ಬಿಡುಗಡೆ ಮಾಡುತ್ತಾರೆಯೇ ಎಂದು ಕೇಳುತ್ತೇನೆ.

ಶೀ ಕಾಗೋಡು ತಿಮ್ಮಪ್ಪ.—ಅಲ್ಲಿ ರಸ್ತೆ ದುರಸ್ತಿ ಆಗಬೇಕಾಗಿದೆ ಎಂಬುದನ್ನು ನಾವು ಮನಗಂಡಿದ್ದೇವೆ. ವಿಶೇಷವಾಗಿ ತೀರ ಕೆಟ್ಟಂಥ, ರಸ್ತೆಗಳು ಆ ಭಾಗದಲ್ಲಿದೆ. ಹೆಚ್ಚು ಹಣ ಕೊಟ್ಟು ಅಲ್ಲಿ ಕೆಲಸ ಮಾಡಿಸತಕ್ಕ ಪ್ರಯತ್ನ ಮಾಡುತ್ತೇನೆ.

ಶ್ರೀ ಎಂ. ಗಂಗಣ್ಣ.—ಕುಷ್ಟಗಿ ತಾಲ್ಲೂಕಿಗೆ ಸಂಬಂಧಿಸಿದ ೫೫ ಕಿಲೋಮೀಟರ್ ರಸ್ತೆ ವಿಜಾಪುರ ಜಿಲ್ಲೆಯ ಹಂನಗಂದ್ ತಾಲ್ಲೂಕಿನ ಸಹಾಯಕ ಎಕ್ಸಿಕ್ಯುಟೀವ್ ಇಂಜಿನಿಯರ್‌ರವರ ವ್ಯಾಪ್ತಿಯಲ್ಲಿ ಬರುತ್ತದೆ. ಅದಕ್ಕೆ ಕೇವಲ ೮೪ ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಆ ರಸ್ತೆಯಲ್ಲಿ ೭ ಹಳ್ಳಗಳಿದ್ದು ಅದಕ್ಕೆ ಹಾಕಿದ್ದ ಹಾಟ್‌ಪ್ಯಾಚ್‌ಗಳು ಕಿತ್ತುಹೋಗಿವೆ. ಆ ೭ ಹಳ್ಳಗಳಿಗೆ ದಿವಂಗತ ಎಸ್.ಆರ್. ಕಂಠಿ ಅವರ ಕಾಲದಲ್ಲಿ ಹಾಟ್‌ಪ್ಯಾಚ್‌ಗಳನ್ನು ಹಾಕಿಸಲಾಗಿತ್ತು. ಆದ್ದರಿಂದ ಅದನ್ನು ರಿಪೇರಿ ಮಾಡಿಸುತ್ತೀರಾ ಎಂದು ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಅದಕ್ಕೆ ಎಷ್ಟು ಹಣ ಬೇಕಾಗಬಹುದು ಎಂಬ ಅಂದಾಜು ಇಲ್ಲ. ಅಲ್ಲಿ ೫೫ ಮೈಲಿ ರಸ್ತೆ ದುರಸ್ತಿ ಮಾಡತಕ್ಕ ಕೆಲಸ ಇದೆ. ಮಾನ್ಯ ಸದಸ್ಯರು ಹೇಳಿದಂತೆ ಕೆಟ್ಟು ಹೋಗಿರುವುದನ್ನು ಆದಷ್ಟು ಜಾಗ್ರತೆ ದುರಸ್ತಿ ಮಾಡಿಸಿಕೊಡುವ ವ್ಯವಸ್ಥೆ ಮಾಡುತ್ತೇವೆ.

Completion of Malaprabha Project.

176 SRI S.S. ARKERI (Balloli).—Will the Minister of State for Major and Medium Irrigation be pleased to state.—

(a) whether it is a fact that the outlay of Malaprabha Project is only Rs. 2.00 crores per annum;

(b) if so, the reasons for not giving more funds to complete the Malaprabha Project earlier.

(c) whether it is a fact that Hon'ble Prime Minister of India has instructed during her recent visit to reviewing the works of State instructed to complete Malaprabha Project within two years.

(d) if so, steps taken by Government to implement the directions of the Hon'ble Prime Minister for completing the Malaprabha Project and the amount required for it?

SRI B.B. CHIMMANA KATTI (Minister of State for Major and Medium Irrigation).—

(a) Outlay for Malaprabha Project is of the order of Rs. 10.00 crores to 11.00 crores per annum.

(b) Funds are allocated to the depending on the priority and total allocation to the irrigation sector.

(c) During the recent review meeting on 4-1-1982 at Bangalore with the Hon'ble Prime Minister of India and officers of the Central Government, it was agreed to complete the project by March 1985 if adequate funds could be provided.

(d) All efforts will be made to complete the project as scheduled The balance amount as per the revised estimate sanctioned during 1/80 is Rs. 37.00 crores.

ಶ್ರೀ ಎಸ್. ಎಸ್. ಆರಕೇರಿ.—ನಾನು (ಬಿ) ಪ್ರಶ್ನೆಯಲ್ಲಿ ಮಲಪ್ರಭಾ ಯೋಜನೆಯು ವಾರ್ಷಿಕ ವೆಚ್ಚ ಕೇವಲ ೨ ಕೋಟಿ ಎಂಬುದು ನಿಜವೇ ಎಂದು ಕೇಳಿರುವುದಕ್ಕೆ ಉತ್ತರವಾಗಿ ಮಲಪ್ರಭಾ ಯೋಜನೆಯ ವಾರ್ಷಿಕ ವೆಚ್ಚ ೧೦ ಕೋಟಿಯಿಂದ ೧೧ ಕೋಟಿಯವರೆಗೆ ಆಗುತ್ತದೆ ಎಂದು ಹೇಳಿದ್ದಾರೆ. ಇದುವರೆಗೆ ಇದಕ್ಕೆ ಎಷ್ಟು ಹಣ ಖರ್ಚಾಗಿದೆ ? ಮತ್ತು ಈ ವರ್ಷ ಎಷ್ಟು ಹಣ ಅಲಾಟ್ ಮಾಡಿದ್ದಾರೆ ಎಂಬುದನ್ನು ಮಾನ್ಯ ಮಂತ್ರಿಗಳು ತಿಳಿಸುತ್ತಾರೆಯೆ ?

ಶ್ರೀ ಬಿ. ಬಿ. ಚಿಮ್ಮನಕಟ್ಟಿ —೧೯೭೩ನೇ ಇಸವಿಯಲ್ಲಿ ಈ ಕೆಲಸ ಪ್ರಾರಂಭವಾಗಿದೆ. ಇದು ಸುಮಾರು ೨೦ ಕೋಟಿ ರೂಪಾಯಿ ಯೋಜನೆ. ರಿವೈಸ್ಡ್ ಎಸ್ಟಿಮೇಟ್ ಪ್ರಕಾರ ೨೧೫ ಕೋಟಿ ರೂಪಾಯಿ ಆಗಿದೆ. ಈಗಾಗಲೇ ಈ ಯೋಜನೆಗೆ ೧೨೪ ಕೋಟಿ ರೂಪಾಯಿಗಳು ಖರ್ಚಾಗಿದೆ. ಇನ್ನು ಉಳಿದ ೯೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕಾಗಿದೆ.

ಶ್ರೀ ಎಸ್. ಎಸ್. ಆರಕೇರಿ.—ಈ ವರ್ಷ ಪ್ರಾಜೆಕ್ಟಿಗೆ ಎಷ್ಟು ಹಣ ಅಲಾಟ್ ಮಾಡಿದ್ದೀರಿ ?

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಸುಮಾರು ೯.೮೮ ಕೋಟಿ ರೂಪಾಯಿಗಳ ಬಜೆಟ್ ಅಲೋಕೇಷನ್ ಈಗಾಗಲೇ ಮಾಡಿದ್ದೇವೆ. ೨.೫ ಕೋಟಿ ರೂಪಾಯಿ ಅಡಿಷನಲ್ ಗ್ರಾಂಟನ್ನು ಮಲಪ್ರಭ ಯೋಜನೆಗೆ ಕೊಟ್ಟಿದ್ದೇವೆ. ಸುಮಾರು ೧೨.೩೦ ಕೋಟಿ ರೂಪಾಯಿಗಳನ್ನು ಈ ವರ್ಷ ಖರ್ಚು ಮಾಡುತ್ತೇವೆ.

ಶ್ರೀ ಎಸ್. ಎಸ್. ಆರಕೇರಿ.—ಭಾರತದ ಪ್ರಧಾನಿಯವರು ಕರ್ನಾಟಕ ಸರ್ಕಾರದ ಕಾರ್ಯಕ್ರಮಗಳನ್ನು ರೆವ್ಯೂ ಮಾಡುವುದಕ್ಕೆ ಬಂದಾಗ ಈ ಯೋಜನೆ ಬಹಳ ಹಿಂದಿನ ಯೋಜನೆಯಾಗಿರುವುದರಿಂದ ಇದಕ್ಕೆ ಹೆಚ್ಚು ಹಣ ಒದಗಿಸಿ ೨ ವರ್ಷಗಳಲ್ಲೇ ಮುಗಿಸಬೇಕು ಎಂದು ಆದೇಶ ಕೊಟ್ಟಿರುವುದು ನಿಜವೇ ? ಕೊಟ್ಟಿದ್ದರೆ ಎಷ್ಟು ವರ್ಷಗಳಲ್ಲಿ ಮುಗಿಸುವುದಕ್ಕೆ ಪ್ರಯತ್ನ ಮಾಡುತ್ತೀರಿ ?

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಪ್ರಧಾನಮಂತ್ರಿಗಳು ಬಂದಾಗ ಈ ವಿಷಯ ಚರ್ಚೆಯಾಗಿ ಮಲಪ್ರಭಾ ಪ್ರಾಜೆಕ್ಟನ್ನು ದಷ್ಟು ಜಾಗ್ರತೆ ಮುಗಿಸಬೇಕು, ೧೯೮೪-೮೫ನೇ ಇಸವಿಯಲ್ಲಿ ಮುಗಿಸಬೇಕು ಎಂದು ಆದೇಶ ನೀಡಿದ್ದಾರೆ. ೧೯೮೪-೮೫ನೇ ಇಸವಿಗೆ ಹೆಚ್ಚು ಹಣ ಕೊಟ್ಟು ಮುಗಿಸುವ ಆಲೋಚನೆ ಸರ್ಕಾರಕ್ಕಿದೆ. ಆದೇ ರೀತಿ ಹಣದ ವ್ಯವಸ್ಥೆ ಮಾಡುತ್ತಿದ್ದೇವೆ.

ಶ್ರೀ ಎಸ್. ಎಸ್. ಆರಕೇರಿ.—ಇದಕ್ಕೆ ಸುಮಾರು ೧೨೪ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ. ಇದರಿಂದ ಎಷ್ಟು ಲಕ್ಷ ಎಕರೆ ಜಮೀನಿಗೆ ನೀರಾವರಿಯಾಗಿದೆ ?

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—೨ ಲಕ್ಷ ೭೩ ಸಾವಿರ ಹೆಕ್ಟೇರುಗಳ ಜಮೀನಿಗೆ ನೀರಾವರಿಯಾಗಿದೆ. ಇನ್ನು ೧ ಲಕ್ಷ ೨೫ ಸಾವಿರ ಹೆಕ್ಟೇರುಗಳಿಗೆ ನೀರಾವರಿ ಆಗಬೇಕಾಗಿದೆ.

ಶ್ರೀ ಎಸ್. ಎಸ್. ಆರಕೇರಿ.—ಮಾನ್ಯ ಮಂತ್ರಿಗಳು ಈ ಯೋಜನೆಯ ಕಾರ್ಯವನ್ನು ೧೯೮೫ರೊಳಗೆ ಮುಗಿಸುತ್ತೇನೆ, ಮತ್ತು ಇದಕ್ಕೆ ಇನ್ನೂ ೯೦ ಕೋಟಿ ರೂಪಾಯಿ ಖರ್ಚು ಮಾಡಬೇಕಾಗಿದೆ

ಎಂದು ಹೇಳಿದರು. Is it possible for the Government to spend within a period of 2–3 years the entire money ? What special measures the Government proposes to take to complete these projects ?

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಆ ದಿಸೆಯಲ್ಲಿ ಸರ್ಕಾರ ಪ್ರಯತ್ನ ಮಾಡುತ್ತಿದೆ. ಹೆಚ್ಚು ಹಣ ಕೊಟ್ಟು ಖರ್ಚು ಮಾಡಿ ಒಂದು ಲಕ್ಷ ೨೫ ಸಾವಿರ ಹೆಕ್ಟೇರುಗಳಿಗೆ ನೀರು ಕೊಡಬೇಕೆಂದು ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ಎಸ್ ಎಸ್. ಆರಕೇರಿ.—ಭಾರತದ ಪ್ರಧಾನಮಂತ್ರಿಗಳ ಕಳಕಳಿಯನ್ನು ಸರ್ಕಾರ ಲಕ್ಷಿಸಿ ೧೯೮೫ರಲ್ಲಿ ಈ ಯೋಜನೆಯನ್ನು ನಿಖರವಾಗಿ ಮುಗಿಸುತ್ತೀರಾ ?

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಮುಗಿಸುತ್ತೇವೆ.

ಶ್ರೀ ಸಿ. ಎಂ. ಇಬ್ರಾಹಿಂ.—ಪ್ರಧಾನಮಂತ್ರಿಗಳು ಖುದ್ದಾಗಿ ಬಂದು ಇದನ್ನು ಪರಿಶೀಲನೆ ಮಾಡಿ ಆದಷ್ಟು ಬೇಗ ಮುಗಿಸಬೇಕೆಂದು ಹೇಳಿದ್ದಾರೆ. ನಿನ್ನೆ ಮಾನ್ಯ ಹಣಕಾಸಿನ ಸಚಿವರು ಮಾತನಾಡುತ್ತಾ ನಮ್ಮ ರಾಜ್ಯದ ಹಣಕಾಸಿನ ಪರಿಸ್ಥಿತಿ ಚೆನ್ನಾಗಿದೆ, ನಮ್ಮಲ್ಲಿ ಓವರ್ ಡ್ರಾಫ್ಟ್ ಇಲ್ಲ ಎಂದು ಹೇಳಿದರು. ಆದರೆ ಈಗ ಹಾಕಿಕೊಂಡಿರುವ ಯೋಜನೆ ಮತ್ತು ಒದಗಿಸುತ್ತಿರುವ ಹಣವನ್ನು ನೋಡಿದಾಗ ಇದೇ ರೀತಿ ಹಣ ಒದಗಿಸುತ್ತಾ ಇದ್ದರೆ ೨೦ ವರ್ಷವಾದರೂ ಈ ಯೋಜನೆಗಳು ಪೂರ್ಣಗೊಳ್ಳುವುದಿಲ್ಲ. ಪ್ರಧಾನಮಂತ್ರಿಯವರು ಈ ಯೋಜನೆಯನ್ನು ಮುಗಿಸಬೇಕೆಂದು ಆದೇಶ ಕೊಟ್ಟಿರುವುದರಿಂದ ಕೇಂದ್ರದಿಂದ ಹಣ ಪಡೆಯುವುದಕ್ಕೆ ಅಥವಾ ಓವರ್ ಡ್ರಾಫ್ಟ್ ತೆಗೆದುಕೊಳ್ಳುವುದಕ್ಕೆ ವ್ಯವಸ್ಥೆ ಮಾಡಿದ್ದೀರಾ ? ಮಾಡದಿದ್ದರೆ ಯೋಜನೆಗಳನ್ನು ಆದಷ್ಟು ಜಾಗ್ರತೆ ಮುಗಿಸಬೇಕು ಎಂಬ ಉದ್ದೇಶವನ್ನು ಸರ್ಕಾರದವರು ಇಟ್ಟುಕೊಂಡಿದ್ದಾರಾ ? ಯೋಜನೆ ಹಣದಲ್ಲಿ ಸಿಬ್ಬಂದಿ ವೆಚ್ಚಕ್ಕೇ ಹೆಚ್ಚು ಖರ್ಚಾಗುತ್ತಿರುವುದರಿಂದ ಕೆಲಸಕಾರ್ಯಗಳಿಗೆ ಹಣವಿಲ್ಲದೆ ಯೋಜನೆಗಳು ನಿಧಾನವಾಗುತ್ತಿವೆ. ಆದ್ದರಿಂದ ತಾತ್ಕಾಲಿಕವಾಗಿ ಯಾದರೂ ಸಿಬ್ಬಂದಿ ವೆಚ್ಚವನ್ನು ಕಡಿತ ಮಾಡುವುದಕ್ಕೆ ಸರ್ಕಾರ ವಿಚಾರ ಮಾಡುತ್ತದೆಯೆ ?

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದ ರೀತಿಯಲ್ಲಿ ಪ್ರಧಾನ ಮಂತ್ರಿಯವರ ಆದೇಶದ ಮೇರೆಗೆ ಮುಂದಿನ ವರ್ಷ ಹೆಚ್ಚು ಹಣವನ್ನು ಒದಗಿಸಬೇಕೆಂದು ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ೨ ವರ್ಷಗಳಲ್ಲಿ ಇದನ್ನು ಮುಗಿಸುವುದಕ್ಕೆ ಸರ್ವ ರೀತಿಯಿಂದಲೂ ಪ್ರಯತ್ನ ಮಾಡುತ್ತಿದ್ದೇವೆ. ಕೆಲವು ಪ್ರಾಜೆಕ್ಟ್‌ನಲ್ಲಿ ಹೆಚ್ಚು ಸಿಬ್ಬಂದಿ ಕಂಡುಬಂದಂತಹ ಕಡೆ ವೇಕೆನ್ಸಿ ಇರುವ ಕಡೆಗೆ ತಾತ್ಕಾಲಿಕವಾಗಿ ಲಿಫ್ಟ್ ಮಾಡಿದ್ದೇವೆ.

ಶ್ರೀ ಸಿ. ಎಂ. ಇಬ್ರಾಹಿಂ.—ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸುವುದಕ್ಕೆ ವಿಶೇಷವಾಗಿ ಆರ್ಥಿಕ ನೆರವನ್ನು ಕೇಂದ್ರ ಸರ್ಕಾರದಿಂದ ಕೇಳಿದ್ದೀರಾ ? ಕೇಳದಿದ್ದ ಪಕ್ಷದಲ್ಲಿ ಕೇಳುವುದಕ್ಕೆ ಗಮನ ಹರಿಸಿದ್ದೀರಾ ? ನೀವು ಒದಗಿಸುತ್ತಿರುವ ಹಣದ ಪ್ರಮಾಣ ನೋಡಿದರೆ ನಿಗಧಿತ ಸಮಯದಲ್ಲಿ ಯೋಜನೆಗಳು ಪೂರ್ಣಗೊಳ್ಳುವುದಿಲ್ಲ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಮಾನ್ಯ ಸದಸ್ಯರ ಅಭಿಪ್ರಾಯವನ್ನು ನಾನೂ ಕೂಡಾ ಪರಿಶೀಲನೆ ಮಾಡುತ್ತೇನೆ. ಹೋದ ವರ್ಷ ಸುಮಾರು ೧೦೦ ಕೋಟಿ ರೂಪಾಯಿಗಳನ್ನು ನೀರಾವರಿಗೆ ಒದಗಿಸಿದ್ದು ಈ ವರ್ಷ ೧೨೭ ಕೋಟಿ ರೂಪಾಯಿ ಕೊಟ್ಟಿದ್ದೇವೆ. ನೀರಾವರಿಗೆ ವಿಶೇಷವಾಗಿ ಆದ್ಯತೆ ಕೊಟ್ಟು ಇನ್ನೂ ಹೆಚ್ಚು ಹಣ ಕೊಡುವುದಕ್ಕೆ ಹಾಗೂ ಕೇಂದ್ರ ಸರ್ಕಾರದಿಂದ ಹಣವನ್ನು ಪಡೆದುಕೊಳ್ಳುವುದಕ್ಕೆ ನಾವೂ ಕೂಡಾ ಪ್ರಯತ್ನ ಮಾಡುತ್ತೇವೆ.

ಶ್ರೀ ಜಿ. ಕೆ. ತಕ್ಕೇಡ್.—ಈ ಯೋಜನೆಯನ್ನು ೧೯೮೫ರ ಮಾರ್ಚಿ ಹೊತ್ತಿಗೆ ಮುಗಿಸಲಾಗುತ್ತದೆಂದು ಮಾನ್ಯ ಮಂತ್ರಿಗಳು ತಿಳಿಸಿದ್ದಾರೆ. ಹಾಗೂ ಇದಕ್ಕೆ ಇನ್ನೆರಡು ವರ್ಷಗಳಲ್ಲಿ ೯೦ ಕೋಟಿ ರೂಪಾಯಿ ಖರ್ಚು ಮಾಡಬೇಕಾಗಿದೆ. ಇನ್ನು ೨ ವರ್ಷಗಳಲ್ಲಿ ಇಷ್ಟು ಹಣ ಖರ್ಚು ಮಾಡಲು ಸಾಧ್ಯವೇ ? ಮಲಪ್ರಭಾ ನೀರಾವರಿ ಪ್ರದೇಶ ನನ್ನ ಕ್ಷೇತ್ರದಲ್ಲೂ ಇದೆ. ಅಲ್ಲಿ ನೀರಿನಿಂದಾಗಿ ಕೊಳಚೆ ಪ್ರದೇಶವಾಗಿ ಭೂಮಿ ಜವಳು, ಸವಕಲು ಆಗಿ ಸುಮಾರು ೧೦ ಸಾವಿರ ಎಕರೆ ಹಾಳಾಗಿದೆ. ಹುಳಿ ಮಾವು, ಮುನವಳ್ಳಿ ಮುಂತಾದ ಗ್ರಾಮಗಳಲ್ಲಿ ನೀರು ತುಂಬಿದೆ. ಇನ್ನು ಯರಗಟ್ಟಿ ಏತ ನೀರಾವರಿಯನ್ನು ಈ ವರ್ಷ ಮುಗಿಸುತ್ತೇವೆಂದು ಹೇಳಿದ್ದೀರಿ. ಇದು ಎಣ್ಣೆ ಕಾಳು ಹಾಗೂ ಬೇಳೆ ಕಾಳುಗಳನ್ನು ಬೆಳೆಯುತಕ್ಕ ಪ್ರದೇಶ. ಈ ಯೋಜನೆಗೆ ಇನ್ನಾದರೂ ಪ್ರತ್ಯೇಕ ಹಣ ಇಟ್ಟು ಯೋಜನೆಯನ್ನು ಪೂರ್ತಿ ಮಾಡುತ್ತೀರಾ ?

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಸವಳು ಜೌಮಿ ವಿಚಾರ ಈ ಪ್ರಶ್ನೆಯಲ್ಲಿ ಉದ್ಭವಿಸುವುದಿಲ್ಲ. ಯರಗಟ್ಟಿ ಏತ ನೀರಾವರಿ ಬಗ್ಗೆ ವಿಶೇಷವಾಗಿ ಹಣ ವ್ಯವಸ್ಥೆ ಮಾಡಿದ್ದೇವೆ. ಅದನ್ನು ಆದಷ್ಟು ಜಾಗ್ರತೆ ಮಂಗಿಸುವ ಬಗ್ಗೆ ಕಾರ್ಯಕ್ರಮ ಹಾಕಿಕೊಂಡಿದ್ದೇವೆ.

ಶ್ರೀ ಸಿ. ಎಂ. ಇಬ್ರಾಹಿಂ.—ನಾನು ಸ್ಪಷ್ಟವಾದ ಪ್ರಶ್ನೆ ಕೇಳಿದ್ದೇನೆ. ಅನೇಕ ಸಲ ಬೆಣ್ಣೆತೊರೆ, ಮಲಪ್ರಭಾ ಯೋಜನೆಗಳ ಬಗ್ಗೆ ಕೇಂದ್ರ ಸರ್ಕಾರದ ಮಂತ್ರಿಗಳ ಜೊತೆ ಚರ್ಚೆ ಮಾಡಿದಾಗ ಅವರನ್ನು ಸ್ಪಷ್ಟವಾಗಿ ಕೇಳಿದ್ದೇವೆ. ನೀರಾವರಿ ಯೋಜನೆಗಳಿಗೋಸ್ಕರ ಕೇಂದ್ರ ಸರ್ಕಾರದಿಂದ ಸಹಾಯವನ್ನು ಕೇಳಿದ್ದೀರಾ ? ಕೇಳದೇ ಇದ್ದರೆ ಇನ್ನು ಮೇಲಾದರೂ ನಿರ್ದಿಷ್ಟವಾದ ಯೋಜನೆ ಇಟ್ಟು ಆ ಬಗ್ಗೆ ಹಣ ತರುವ ಬಗ್ಗೆ ಸರ್ಕಾರ ಗಮನ ಹರಿಸಿದೆಯೇ ? ಆಂಧ್ರ ಸರ್ಕಾರದವರು ವಿದೇಶದಿಂದ ಈ ಬಾಬಿಗಾಗಿ ಹಣ ಹೂಡಿಸಿದ್ದಾರೆ. ಮಹಾರಾಷ್ಟ್ರ ಸರ್ಕಾರದವರು ಸುಮಾರು ೬೦ ಕೋಟಿ ರೂಪಾಯಿಗಳನ್ನು ಪರದೇಶದಿಂದ ತಂದಿದ್ದಾರೆ. ನಿರ್ದಿಷ್ಟ ಯೋಜನೆಗಳಿಗಾಗಿ ನೀವು ಕೇಂದ್ರ ಸರ್ಕಾರಕ್ಕೆ ಹೆಚ್ಚು ವರಿ ಹಣ ಕೇಳಿದ್ದೀರಾ ? ಇಲ್ಲದೇ ಇದ್ದರೆ ಕೇಳುವ ಪ್ರಯತ್ನ ಮಾಡುತ್ತಿದ್ದೀರಾ ? ಇದಲ್ಲದೇ ಹೊರಗೆಡೆಯಿಂದ ಹಣ ಬರುವುದು ಇದೆಯೇ ?

ಶ್ರೀ ಬಿ ಬಿ. ಚಿಮ್ಮನಕಟ್ಟಿ.—ಕೇಂದ್ರ ಸರ್ಕಾರದ ನೀರಾವರಿ ಕಾರ್ಯದರ್ಶಿಯವರಿಗೆ ಯಾವುದಕ್ಕೂ ಸ್ಪೆಸಿಫಿಕ್ಕಾಗಿ ಹಣ ಕೇಳಿಲ್ಲ. ಎಲ್ಲಾ ಇಲಾಖೆಯವರೂ ಕೇಂದ್ರಕ್ಕೆ ಹಣ ಕೇಳಿದ್ದಾರೆ. ಆ ರೀತಿ ನಮ್ಮ ಸರ್ಕಾರ ಹಣ ಪಡೆದಿದೆ. ಮಾನ್ಯ ಸದಸ್ಯರು ನೀರಾವರಿ ಯೋಜನೆಗೇ ನಿರ್ದಿಷ್ಟವಾಗಿ ವಿಶೇಷ ಹಣವನ್ನು ಕೇಳಿ ಪಡೆದುಕೊಳ್ಳಬೇಕೆಂದು ಹೇಳಿದ್ದಾರೆ. ಅದನ್ನೂ ಕೂಡಾ ಪ್ರಯತ್ನ ಮಾಡುತ್ತೇನೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಶ್ರೀ ಜೆ. ಕೆ. ತಕ್ಕೇಡ್.—ಜವಳು, ಸವಳಿನಿಂದಾಗಿ ೧೦ ಸಾವಿರ ಎಕರೆ ಹಾಳಾಗಿದೆ. ಈ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರಿಸಲಿಲ್ಲ.

ಅಧ್ಯಕ್ಷರು.—ಆ ಬಗ್ಗೆ ಬೇರೆ ಪ್ರಶ್ನೆ ಹಾಕಿ ಸ್ವಾಮಿ.

Construction of K. R. S. Right Bank Canal

209 SRI D. JAYADEVARAJ URS (Chamundeshwari).—Will the Minister of State for Major & Medium Irrigation be pleased to state:-

(a) whether an estimate has been prepared for construction of a Water Canal across Right Bank Canal of Krishnaraja Sagar (Varuna) near K. R. Mills in Mysore-Bangalore Road ; if so, its estimated cost :

(b) whether tender has been called for this work ;

(c) if so, whether the tender has been sanctioned and the work has commenced ?

SRI B. B. CHIMMANKATTI (Minister of State for Major and Medium Irrigation).—

(a) Yes. Rs. 195 lakhs (as per rate list of 1979-80 Kabini Circle

(b) Yes.

(c) No

ಶ್ರೀ ಡಿ. ಜಯದೇವರಾಜ ಅರಸ್.—ಅಧ್ಯಕ್ಷರೇ ಕೃಷ್ಣರಾಜ ಸಾಗರ ಬಲದಂಡೆ ನಾಲೆಗೆ ನೀರುಗಾಲುವೆ ನಿರ್ಮಾಣಕ್ಕೆ ಟೆಂಡರ್ ಕರೆಯಲಾಗಿದೆಯೆಂದು ಹೇಳಲಾಗಿದೆ. ಈ ನೀರುಗಾಲುವೆಯನ್ನು ಎಷ್ಟು ವರ್ಷದಲ್ಲಿ ಕಟ್ಟಿ ಮುಗಿಸುತ್ತೀರಿ ?